ಕರ್ನಾಟಕ ಸರ್ಕಾರ

ಅಲ್ಪಸಂಖ್ಯಾತರ ನಿರ್ದೇಶನಾಲಯ

ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 200 **ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ** 2023-24ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ, ಪ್ರವೇಶ ಪರೀಕ್ಷೆ ಮತ್ತು ದಾಖಲಾತಿಯ ಮಾರ್ಗಸೂಚಿಗಳು.

# 2023-24


ಕರ್ನಾಟಕ ಸರ್ಕಾರ

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**

**ಅಲ್ಪಸಂಖ್ಯಾತರ ನಿರ್ದೇಶನಾಲಯ**

**MINORITY WELFARE DEPARTMENT**

**DIRECTORATE OF MINORITIES**

ನಂ.16/ಎ, ಮೌಲಾನಾ ಆಜಾದ್ ಭವನ,

ಅಲ್ಪಸಂಖ್ಯಾತರ ನಿರ್ದೇಶನಾಲಯ,

ಕಾವೇರಪ್ಪ ಲೇಔಟ್, ವಸಂತ ನಗರ, ಬೆಂಗಳೂರು-560 052.

**(#16C-2, Miller Tank Bed Area Vasantha Nagara, Bengaluru-560052)**

**ದೂರವಾಣಿ: 080-22864212.**

**ಫ್ಯಾಕ್ಸ್: 080-22863618**

**Help Line No: 8277799990**

**Email:**directorgokdom@gmail.com

**Web**: www.dom.karnataka.gov.in

**1. ಪೀಠಿಕೆ:–**

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ 200 ಮೌಲಾನಾ ಆಜಾದ್ ಮಾದರಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಾತಿಗೆ ಸುಮಾರು 12000 ಸೀಟುಗಳು ಲಭ್ಯವಿದ್ದು, ಸದರಿ ಸೀಟುಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಲು ಅನುಸರಿಸಬೇಕಾದ ಪ್ರವೇಶ ಪರೀಕ್ಷೆ, ವಿದ್ಯಾರ್ಥಿಗಳ ಸಂಖ್ಯೆ, ವರ್ಗವಾರು ಮೀಸಲಾತಿ, ವಿಶೇಷ ವರ್ಗಗಳಿಗೆ ಮೀಸಲಾತಿ ಹಾಗೂ ಪರೀಕ್ಷೆ ಮಾರ್ಗಸೂಚಿ ಈ ಕೆಳಕಂಡ ನಿಬಂಧನೆ/ಷರತ್ತು/ಮಾರ್ಗಸೂಚಿಗಳನ್ನು ಅನುಸರಿಸಬೇಕಾಗಿರುತ್ತದೆ.

2. **ಪ್ರವೇಶಾತಿ ಸಂಖ್ಯೆ:** ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಸಾಮಾನ್ಯವಾಗಿ 6ನೇ ತರಗತಿಯ ಪ್ರವೇಶಾತಿ ಸಂಖ್ಯೆಯು ಈ ಕೆಳಗಿನಂತಿರುತ್ತದೆ ಹಾಗೂ ಕೆಲವು ಶಾಲೆಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಪ್ರವೇಶಾತಿಯನ್ನು ಸರ್ಕಾರದ ಆದೇಶದಂತೆ ಪರಿಷ್ಕರಿಸಲಾಗಿರುತ್ತದೆ.

| **ಕ್ರ.ಸಂ** | **ಶಾಲೆಯ ಹೆಸರು** | **6ನೇ ತರಗತಿಗೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ** |
|---|---|---|
| 1 | ಮೌಲಾನಾ ಆಜಾದ್ ಮಾದರಿ ಶಾಲೆ | 60 |

3. **ವರ್ಗವಾರು ಮೀಸಲಾತಿ ಹಂಚಿಕೆ:** ಸರ್ಕಾರದ ಆದೇಶಗಳನ್ವಯ ಮಂಜೂರಾಗಿರುವ ವಿವಿಧ ವಸತಿ ಶಾಲೆಗಳಿಗೆ 6ನೇ ತರಗತಿಗೆ ಆಯ್ಕೆ ಮಾಡಿ ದಾಖಲು ಮಾಡುವಲ್ಲಿ ಪ್ರತಿ ವರ್ಗದ ವಸತಿ ಶಾಲೆಯು ಅನುಸರಿಸಬೇಕಾದ ಮೀಸಲಾತಿ ವಿವರ ಕೆಳಕಂಡಂತೆ ಇರುವುದು. ಸದರಿ ಮೀಸಲಾತಿಯನ್ನು 6ನೇ ತರಗತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ದಾಖಲಾತಿ ಮಾಡಿಕೊಳ್ಳುವಾಗ ತಪ್ಪದೇ ಅನುಷ್ಠಾನಗೊಳಿಸುವುದು.

**a) ಮೌಲಾನಾ ಆಜಾದ್ ಮಾದರಿ ಶಾಲೆಗಳು:–**

**(1)** ಪ್ರತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ : 60,

**(2)** ಮೀಸಲಾತಿ ಅಲ್ಪಸಂಖ್ಯಾತರು : 75% (45 ವಿದ್ಯಾರ್ಥಿಗಳು),

**(3)** ಇತರೆ ವರ್ಗದ ಮೀಸಲಾತಿ: 25% (15 ವಿದ್ಯಾರ್ಥಿಗಳು),

**(4)** ಹೆಣ್ಣು ಮಕ್ಕಳಿಗೆ 50% ಸ್ಥಾನಗಳನ್ನು ಮೀಸಲಿರಿಸಲಾಗಿದೆ.

| | **ಅಲ್ಪಸಂಖ್ಯಾತರು(75%)** | | | | | | | | | | **ಹಿಂದುಳಿದ ವರ್ಗ, ಎಸ್‌ಸಿ ಮತ್ತು ಎಸ್‌ಟಿ(25%)** | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| **ದಾಖಲಾತಿ ಸಂಖ್ಯೆ** | **ಮುಸ್ಲಿಂ (75%)** | | **ಕ್ರಿಶ್ಚಿಯನ್ (14%)** | | **ಜೈನ್ (6%)** | | **ಬುದ್ದಿಸ್ಟ (2%)** | | **ಸಿಖ್/ಪಾಸಿರ್ (2%)** | | **ಪ್ರವರ್ಗ –1 (4%)** | | **2ಎ(15%)** | | **3ಎ (4%)** | | **3ಬಿ (5%)** | | **ಎಸ್‌ಸಿ (15%)** | | **ಎಸ್‌ಟಿ (4%)** | |
| **ಲಿಂಗ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** | **ಗ** | **ಹೆ** |
| **40** | 11 | 11 | 2 | 2 | 1 | 1 | 0 | 1 | 1 | 0 | 0 | 1 | 2 | 1 | 1 | 0 | 0 | 1 | 2 | 1 | 0 | 1 |
| 50 | 15 | 14 | 2 | 3 | 1 | 1 | 1 | 0 | 0 | 1 | 1 | 0 | 2 | 2 | 0 | 1 | 1 | 0 | 2 | 2 | 0 | 1 |
| 60 | 17 | 17 | 3 | 3 | 1 | 2 | 1 | 0 | 0 | 1 | 1 | 1 | 3 | 2 | 0 | 1 | 1 | 0 | 3 | 2 | 0 | 1 |

**(ಷರಾ:– ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮೀಸಲಾತಿ ಆದೇಶಗಳಿಗೆ ಅನುಸಾರ ಬದಲಾವಣೆಗೆ ಒಳಪಟ್ಟಿರುತ್ತದೆ)**

4. **ಜಾತಿ ಮತ್ತು ಆದಾಯ ಪ್ರಮಾಣ ಪತ್ರ:–**

| ವರ್ಗ | ಜಾತಿ ಪ್ರಮಾಣ ಪತ್ರ | ಆದಾಯ ಪ್ರಮಾಣ ಪತ್ರ |
|---|---|---|
| **ಅಲ್ಪಸಂಖ್ಯಾತರು** | ಅಲ್ಪಸಂಖ್ಯಾತರ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ/ವರ್ಗ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಹೊಂದಿರುವುದು | ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.100000/– ಮಿತಿಯಲ್ಲಿರಬೇಕು ಹಾಗೂ ಹಿಂದುಳಿದ ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.2,50,000/– ಮಿತಿಯೊಳಗಿರತಕ್ಕದ್ದು |
| **ಹಿಂದುಳಿದ ವರ್ಗ** | ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ/ವರ್ಗ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಹೊಂದಿರುವುದು | ಹಿಂದುಳಿದ ವರ್ಗಗಳ 2ಎ,2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.100000/– ಮಿತಿಯಲ್ಲಿರಬೇಕು ಹಾಗೂ ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.2,50,000/– ಮಿತಿಯೊಳಗಿರತಕ್ಕದ್ದು |
| **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ** | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ/ವರ್ಗ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರಬೇಕು | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.2,50,000/– ಮಿತಿಯೊಳಗಿರತಕ್ಕದ್ದು |

5. **ಪ್ರವೇಶ ಪ್ರಕ್ರಿಯೆ:–** ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಾತಿಗೆ ಸಂಬಂಧಿಸಿದಂತೆ **ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು,** ಎಲ್ಲಾ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪೌರಸಭೆ, ನಗರಸಭೆ ಹಾಗೂ ಇತರೆ ಅಂಗ ಸಂಸ್ಥೆಗಳ ಮೂಲಕ ತಾಲ್ಲೂಕಿನಲ್ಲಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವಂತೆ ಪ್ರಚಾರ ಮಾಡುವುದು ಹಾಗೂ ಪ್ರತಿ ಶಾಲೆಯ ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಇತರೆ ಸಿಬ್ಬಂದಿಗಳ ಮೂಲಕ ತಮ್ಮ ವ್ಯಾಪ್ತಿಯಲ್ಲಿರುವ ಪ್ರತಿ ಗ್ರಾಮ ಮತ್ತು ಪಟ್ಟಣಗಳಿಗೆ ಭೇಟಿ ನೀಡಿ ಮನೆ–ಮನೆ ಪ್ರಚಾರ ಕಾರ್ಯಗಳನ್ನು ಕೈಗೊಳ್ಳುವುದು. ಸದರಿ ಶೈಕ್ಷಣಿಕ ವರ್ಷದಲ್ಲಿ ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಶೇ.100ರಷ್ಟು ದಾಖಲಾತಿ ಹೊಂದಲು ಶ್ರಮವಹಿಸುವುದು.
6. **ಎಲ್ಲಾ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಶೇ.100%** ದಾಖಲಾತಿಯನ್ನು ಪಡೆಯಲು ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.

**7. ಅಭ್ಯರ್ಥಿಗಳು ಅರ್ಜಿಸಲ್ಲಿಸಲು ಇರಬೇಕಾದ ಅರ್ಹತೆಗಳು:–**

(1) ಅಭ್ಯರ್ಥಿಯು ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಿಂದ 5ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಅಂಕಪಟ್ಟಿಯನ್ನು ಹೊಂದಿರಬೇಕು.

(2) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(3) 09 ರಿಂದ 13 ವಯೋಮಾನದವರಾಗಿರಬೇಕು.

**8. ಅಭ್ಯರ್ಥಿಗಳು ಅರ್ಜಿಸಲ್ಲಿಸುವ ವಿಧಾನ:–**

c. ನಿರ್ದೇಶನಾಲಯವು ಸೂಚಿಸಿದಂತೆ ಪೋಷಕರು/ವಿದ್ಯಾರ್ಥಿಗಳು ನೇರವಾಗಿ ಅರ್ಜಿಗಳನ್ನು ಹತ್ತಿರದ ಮೌಲಾನಾ ಆಜಾದ್ ಮಾದರಿ ಶಾಲೆ, ಅಲ್ಪಸಂಖ್ಯಾತರ ತಾಲ್ಲೂಕು ಮಾಹಿತಿ ಕೇಂದ್ರ ಮತ್ತು ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿಗಳಲ್ಲಿ ಅರ್ಜಿಯನ್ನು ಉಚಿತವಾಗಿ ಪಡೆದು ಸಲ್ಲಿಸಬಹುದು.

**9. ಅರ್ಜಿ ಸಲ್ಲಿಸಲು ಬೇಕಾಗುವ ದಾಖಲಾತಿಗಳು:_**

(1)ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ

(2)ಜಾತಿ ಮತ್ತು ಆದಾಯ ಪ್ರಮಾಣ ಪತ್ರ

(3)ಶಾಲಾ ಘೋಷಣಾ ಪ್ರಮಾಣ ಪತ್ರ

(4)ಹಿಂದಿನ ತರಗತಿಯ ಅಂಕಪಟ್ಟಿ

(5)ವಿದ್ಯಾರ್ಥಿಯ ಅಂಗವಿಕಲ ಪ್ರಮಾಣ ಪತ್ರ

**10. ಪ್ರವೇಶ ಪರೀಕ್ಷೆ ವಿಧಾನ :–**

**(1)** ಮೌಲಾನಾ ಆಜಾದ್ ಮಾದರಿ ಶಾಲೆಗಳ ಮಂಜೂರಾತಿ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚು ಅರ್ಜಿಗಳು ಬಂದಲ್ಲಿ ಮಾತ್ರ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರು ತಮ್ಮ ಅಧೀನದ ಶಾಲೆಗಳಲ್ಲಿ** ಪ್ರವೇಶ ಪರೀಕ್ಷೆಯನ್ನು ನಡೆಸುವುದು ಇಲ್ಲದಿದ್ದಲ್ಲಿ ನಿಯಮಾನುಸಾರ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಅನುಸಾರ ದಾಖಾಲಾತಿ ಪ್ರಕ್ರಿಯೆಯನ್ನು ಕೈಗೊಳ್ಳುವುದು.

(2) ಆಯ್ಕೆಗೆ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳೇ ನೇರ ಮಾನದಂಡವಾಗಿರುತ್ತದೆ.

(3) ಪ್ರವೇಶ ಪರೀಕ್ಷೆಯು 100 ಅಂಕಗಳ ಬಹು ಆಯ್ಕೆ ಮಾದರಿಯಲ್ಲಿರುತ್ತದೆ.

(4) ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಬಾಷೆಯಲ್ಲಿದ್ದು, 100 ಅಂಕದ 100 ಪ್ರಶ್ನೆಗಳನ್ನು ಒಳಗೊಂಡಿದ್ದು, ಸದರಿ ಪ್ರಶ್ನೆಗಳನ್ನು ಉತ್ತರಿಸಲು 120 ನಿಮಿಷ ಕಾಲಾವಕಾಶ ನೀಡುವುದು.

(5) ಶೇ.90% ಪ್ರಶ್ನೆಗಳು 4 ಮತ್ತು 5 ನೇ ತರಗತಿಯ ಪಠ್ಯಾಧಾರಿತವಾಗಿರುತ್ತದೆ.

(6) ನಿಗಧಿ ಪಡಿಸಿದ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾದರೆ ಮಾತ್ರ ಪ್ರವೇಶ ಪರೀಕ್ಷೆಗಳನ್ನು ನಡೆಸುವುದು.

**11. ಖಾಲಿ ಉಳಿದ ಸ್ಥಾನಗಳ ಭರ್ತಿ:–**

(4) ಬಾಲಕ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕಿಗೆ ಅವಕಾಶ ಕಲ್ಪಿಸುವುದು.

(5) ಬಾಲಕಿ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕರಿಗೆ ಅವಕಾಶ ಕಲ್ಪಿಸುವುದು.

(6) ಸರ್ಕಾರದ ಆದೇಶದ ಮೀಸಲಾತಿಯನ್ವಯ ಶೇ.75:25 ರಂತೆ ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸುವುದು.

**12. ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ (ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು ತಮ್ಮ ಹಂತದಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿ ಸೂಕ್ತ ಕ್ರಮಕೈಗೊಳ್ಳುವುದು)**

| | | |
|---|---|---|
| 1 | ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | ಶೈಕ್ಷಣಿಕ ವರ್ಷದ ಪ್ರಾರಂಭದ ದಿನಾಂಕ ಅನುಗುಣವಾಗಿ ಪ್ರವೇಶ ಪೂರ್ವ ಪರೀಕ್ಷೆ/ದಾಖಲಾತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ತಮ್ಮ ಹಂತದಲ್ಲಿ ಅಧಿಸೂಚನೆ ಹೊರಡಿಸಿ ದಿನಾಂಕ:28.05.2023ರೊಳಗಾಗಿ ದಾಖಲಾತಿ ಪ್ರಕ್ರಿಯೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವುದು. |
| 2 | ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ | |
| 3 | ಅರ್ಜಿಗಳ ಪರಿಶೀಲನೆ ಮಾಡಿ ಲಿಖಿತ ಪರೀಕ್ಷೆ ನಡೆಸುವ ಸಂಭವನೀಯ ದಿನಾಂಕ (ಭಾನುವಾರ) | |
| 4 | ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ದಿನಾಂಕ | |
| 5 | ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ | |
| 6 | ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ದಿನಾಂಕ | |
| 7 | ಶಾಲೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪ್ರಾರಂಭಿಸುವ ದಿನಾಂಕ | |

**13. ಮೌಲಾನಾ ಆಜಾದ್ ಮಾದರಿ ಶಾಲೆಗಳ ನಿರ್ವಹಣೆ: –**

200 ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು 60 ಸಂಖ್ಯಾಬಲದೊಂದಿಗೆ 6ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

**14. ವಿಶೇಷ ಸೂಚನೆ:–**

- ದಾಖಲಾತಿ ಆಂದೋಲನದಲ್ಲಿ ವಸತಿ ಶಾಲೆ/ಮೌಲಾನಾ ಆಜಾದ್ ಮಾದರಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ತಾಲ್ಲೂಕು ವಿಸ್ತರಣಾಧಿಕಾರಿಗಳು ವ್ಯಾಪಕ ಪ್ರಚಾರವನ್ನು ಕೈಗೊಳ್ಳುವುದರ ಮೂಲಕ ಶಾಲಾ ದಾಖಲಾತಿಯನ್ನು ಹೆಚ್ಚಿಸುವುದು.
- ಈ ಮೇಲ್ಕಂಡಂತೆ 2023–24ನೇ ಸಾಲಿನ ಶಾಲಾ ವಾರ್ಷಿಕ ಚಟುವಟಿಕೆಗಳ ನಿರ್ವಹಣೆಗಾಗಿ (ಶಿಕ್ಷಣ ಇಲಾಖೆಯ ಮಾರ್ಗಸೂಚಿಗಳನ್ವಯ) ಪ್ರತ್ಯೇಕ ಸುತ್ತೋಲೆ ನೀಡಲಾಗುವುದು.
- ಈ ಮೇಲ್ಕಂಡಂತೆ ಶೈಕ್ಷಣಿಕ ದಾಖಲಾತಿ ಆಂದೋಲನ ಅವಧಿಗಳನ್ನು ನಿಗಧಿಪಡಿಸಿದ್ದು, ಅದರಂತೆ ಅಗತ್ಯ ಪೂರಕ ಸಿದ್ದತೆಗಳನ್ನು ಮತ್ತು ಮುಂಜಾಗೃತಾ ಕ್ರಮಗಳನ್ನು ಕೈಗೊಂಡು, ಯಶಸ್ವಿಗೊಳಿಸಲು ಸೂಚಿಸಿದೆ.
- **ಈ ಮಾರ್ಗಸೂಚಿಯು ಕಾಲಕಾಲಕ್ಕೆ ಇಲಾಖೆ, ಸರ್ಕಾರ ಮತ್ತು ಆಯಾ ಜಿಲ್ಲಾಡಳಿತಗಳು ಹೊರಡಿಸುವ ಮಾರ್ಗಸೂಚಿಗಳಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.**

******